# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 428 |
| 2 ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 ಉತ್ತರಿಸುವ ದಿನಾಂಕ | : | 07.12.2023 |
| 4 ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಖಾಸಗಿ ವ್ಯಕ್ತಿಗಳಿಗೆ ಗೃಹ ಇಲಾಖೆಯಿಂದ ಭದ್ರತಾ ವ್ಯವಸ್ಥೆ ನೀಡಲು ಇರುವ ನಿಯಮಗಳೇನು (ವಿವರ ನೀಡುವುದು) | ಕೇಂದ್ರ ಗೃಹ ಮಂತ್ರಾಲಯ / ಕರ್ನಾಟಕ ರಾಜ್ಯ ಸರ್ಕಾರದಿಂದ ಹೊರಡಿಸಿರುವ ಭದ್ರತಾ ಮಾರ್ಗಸೂಚಿಗಳನ್ವಯ ಹಾಗೂ ಸ್ಥಳೀಯ ಪೊಲೀಸ್ ಅಧಿಕಾರಿಗಳು ನೀಡುವ ಬೆದರಿಕೆ ನಿರ್ಧರಣಾ ವರದಿಗಳ ಆಧಾರದ ಮೇರೆಗೆ ಭದ್ರತೆ ನೀಡಲಾಗುತ್ತಿದೆ. |
| ಆ | ರಾಜ್ಯದಲ್ಲಿ ಯಾವೆಲ್ಲಾ ಖಾಸಗಿ ವ್ಯಕ್ತಿಗಳಿಗೆ ಗೃಹ ಇಲಾಖೆಯಿಂದ ಭದ್ರತಾ ವ್ಯವಸ್ಥೆ ನೀಡಲಾಗುತ್ತಿದೆ; ಭದ್ರತಾ ವ್ಯವಸ್ಥೆ ನೀಡಲಾಗುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು; ಈ ಕುರಿತು ಇಲಾಖಾ ನಿಯಮಗಳೇನು; ಈ ಭದ್ರತಾ ವ್ಯವಸ್ಥೆಗಳ ಖರ್ಚುವೆಚ್ಚಗಳೇನು; ಮತ್ತು ಅದನ್ನು ಯಾರು ಭರಿಸುತ್ತಿದ್ದಾರೆ; (ಕಳೆದ ಮೂರು ವರ್ಷಗಳ ವಿವರ ನೀಡುವುದು) | ರಾಜ್ಯದಲ್ಲಿ 235 ಖಾಸಗಿ ವ್ಯಕ್ತಿಗಳಿಗೆ ಭದ್ರತೆ ಒದಗಿಸಲಾಗುತ್ತಿದೆ.<br><br>ಕೇಂದ್ರ ಗೃಹ ಮಂತ್ರಾಲಯ / ಕರ್ನಾಟಕ ರಾಜ್ಯ ಸರ್ಕಾರದಿಂದ ಹೊರಡಿಸಿರುವ ಭದ್ರತಾ ಮಾರ್ಗಸೂಚಿಗಳನ್ವಯ ಹಾಗೂ ಸ್ಥಳೀಯ ಪೊಲೀಸ್ ಅಧಿಕಾರಿಗಳು ನೀಡುವ ಬೆದರಿಕೆ ನಿರ್ಧರಣಾ ವರದಿಗಳ ಆಧಾರದ ಮೇರೆಗೆ ಭದ್ರತೆ ನೀಡಲಾಗುತ್ತಿದೆ.<br><br>ಶುಲ್ಕ ಪಾವತಿ ಆಧಾರದ ಮೇಲೆ ಒದಗಿಸಲಾದ ಭದ್ರತೆ ಕುರಿತು ಸರ್ಕಾರದ ಆದೇಶದಂತೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ.<br><br>ರಕ್ಷಣೆಗೊಳಪಟ್ಟ ವ್ಯಕ್ತಿಗಳ ಭದ್ರತಾ ಹಿತದೃಷ್ಟಿಯಿಂದ ಈ ವಿಷಯದಲ್ಲಿ ಗೌಪ್ಯತೆಯನ್ನು ಕಾಪಾಡುವುದು ಸೂಕ್ತವಾಗಿರುವುದರಿಂದ, ಸಂಕ್ಷಿಪ್ತ ವಿವರಗಳನ್ನು ನೀಡಲಾಗಿರುತ್ತದೆ. |
| ಇ | ರಾಜ್ಯದಲ್ಲಿ ಯಾವ್ಯಾವ ಸ್ವಾಮೀಜಿಗಳಿಗೆ ಗೃಹ ಇಲಾಖೆಯಿಂದ ಭದ್ರತಾ ವ್ಯವಸ್ಥೆ ನೀಡಲಾಗುತ್ತಿದೆ; ಭದ್ರತಾ ವ್ಯವಸ್ಥೆ ನೀಡಲು ಕಾರಣಗಳೇನು; ಭದ್ರತಾ ವ್ಯವಸ್ಥೆ ನೀಡುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು;(ವಿವರ ನೀಡುವುದು) | ರಾಜ್ಯದಲ್ಲಿ 24 ಸ್ವಾಮೀಜಿಗಳಿಗೆ ಭದ್ರತೆ ಒದಗಿಸಲಾಗುತ್ತಿದೆ.<br><br>ಬೆದರಿಕೆ ನಿರ್ಧರಣಾ ವರದಿ ಆಧರಿಸಿ, ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ / ರಾಜ್ಯ ವರ್ಗೀಕೃತ ಭದ್ರತಾ ಪುನರ್ ವಿಮರ್ಶಣಾ ಸಮಿತಿಯ ನಿರ್ಣಯದಂತೆ ಭದ್ರತೆಯನ್ನು ಒದಗಿಸಲಾಗುತ್ತದೆ.<br><br>ವಿವರದ ಕುರಿತು, ರಕ್ಷಣೆಗೊಳ್ಳಪಟ್ಟ ವ್ಯಕ್ತಿಗಳ ಭದ್ರತಾ ಹಿತದೃಷ್ಟಿಯಿಂದ ಈ ವಿಷಯದಲ್ಲಿ ಗೌಪ್ಯತೆಯನ್ನು ಕಾಪಾಡುವುದು ಸೂಕ್ತವಾಗಿರುತ್ತದೆ. |

| | | |
|---|---|---|
| ಈ | ಪ್ರಸ್ತುತ ಸ್ವಾಮೀಜಿಗಳಿಗೆ ಗೃಹ ಇಲಾಖೆಯು ನೀಡಲಾಗುತ್ತಿರುವ ಭದ್ರತಾ ವ್ಯವಸ್ಥೆಯ ಖರ್ಚು ಎಷ್ಟು ಮತ್ತು ಅದನ್ನು ಯಾರು ಭರಿಸುತ್ತಿದ್ದಾರೆ; ಭದ್ರತೆಯ ವ್ಯವಸ್ಥೆ ಪಡೆದ ವ್ಯಕ್ತಿವಾರು ವಿವರ ನೀಡುವುದು; | ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ / ರಾಜ್ಯ ವರ್ಗೀಕೃತ ಭದ್ರತಾ ಪುನರ್ ವಿಮರ್ಶಣಾ ಸಮಿತಿಯ ನಿರ್ಣಯದಂತೆ ಪ್ರಸ್ತುತ ಸ್ವಾಮೀಜಿಗಳಿಗೆ ಶುಲ್ಕ ರಹಿತವಾಗಿ, ಬೆದರಿಕೆಯ ಸ್ವರೂಪದ ಆಧಾರದ ಮೇರೆಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ.<br><br>ವ್ಯಕ್ತಿವಾರು ವಿವರದ ಕುರಿತು, ರಕ್ಷಣೆಗೊಳ್ಳಪಟ್ಟ ವ್ಯಕ್ತಿಗಳ ಭದ್ರತಾ ಹಿತದೃಷ್ಟಿಯಿಂದ ಈ ವಿಷಯದಲ್ಲಿ ಗೌಪ್ಯತೆಯನ್ನು ಕಾಪಾಡುವುದು ಸೂಕ್ತವಾಗಿರುತ್ತದೆ. |
| ಉ | ಗೃಹ ಇಲಾಖೆಯಿಂದ ಭದ್ರತಾ ವ್ಯವಸ್ಥೆ ನೀಡಲಾಗುತ್ತಿರುವ ಖಾಸಗಿ ವ್ಯಕ್ತಿಗಳ ಮೇಲೆ ಯಾವುದಾದರು ಪ್ರಕರಣಗಳಿವೆಯೇ; ಯಾವುದೇ ಖಾಸಗಿ ವ್ಯಕ್ತಿಗಳು ಭದ್ರತೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ; (ವಿವರ ನೀಡುವುದು). | ಕೆಲ ಖಾಸಗಿ ವ್ಯಕ್ತಿಗಳ ಮೇಲೆ ಪ್ರಕರಣಗಳಿರುತ್ತವೆ.<br><br>ಹಲವು ಖಾಸಗಿ ವ್ಯಕ್ತಿಗಳು ಭದ್ರತೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.<br><br>ವಿವರ ನೀಡುವ ಕುರಿತು, ಗೌಪ್ಯತೆಯನ್ನು ಕಾಪಾಡುವುದು ಸೂಕ್ತವಾಗಿರುತ್ತದೆ. |
| ಊ | ಖಾಸಗಿ ವ್ಯಕ್ತಿಗಳಿಗೆ ಗೃಹ ಇಲಾಖೆಯಿಂದ ಭದ್ರತಾ ವ್ಯವಸ್ಥೆ ನೀಡಲು ಬಳಕೆಯಾಗುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆಯೆಷ್ಟು; ಅದರ ವೆಚ್ಚವೆಷ್ಟು; ವೆಚ್ಚವನ್ನು ಯಾರು ಭರಿಸುತ್ತಿದ್ದಾರೆ; ಇಲ್ಲಿಯವರೆಗೆ ಭದ್ರತಾ ವೆಚ್ಚವನ್ನು ಭದ್ರತೆ ಪಡೆದ ವ್ಯಕ್ತಿಯಿಂದ ಸಂಗ್ರಹಿಸಲಾಗಿದೆಯೇ; ಸಂಗ್ರಹಿಸಿದ ಮೊತ್ತ ಹಾಗೂ ಪೊಲೀಸ್ ಹುದ್ದೆವಾರು ಮತ್ತು ಸಂಖ್ಯೆ ಸಹಿತ ವೆಚ್ಚದ ವಿವರ ನೀಡುವುದು? | ಭದ್ರತೆ ಒದಗಿಸುವ ಪ್ರಕ್ರಿಯೆ ನಿರಂತರವಾಗಿದ್ದು, ವ್ಯಕ್ತಿಗಳ ಸ್ಥಾನ/ಬೆದರಿಕೆ ನಿರ್ಧರಣಾ ವರದಿಗಳನ್ನು ಆಧರಿಸಿ ಅಂಗರಕ್ಷಕರನ್ನು ಒದಗಿಸುವ / ಹಿಂಪಡೆಯುವ/ ಹೆಚ್ಚಿಸುವ/ಕಡಿಮೆಗೊಳಿಸುವ ಪ್ರಕ್ರಿಯೆ ನಿರಂತರವಾಗಿದ್ದು, ಸಿಬ್ಬಂದಿಗಳ ನಿಖರ ಸಂಖ್ಯೆ ಒದಗಿಸುವುದು ಕಷ್ಟಸಾಧ್ಯ.<br><br>ಶುಲ್ಕ ಪಾವತಿ ಆಧಾರದ ಮೇಲೆ ಒದಗಿಸಲಾದ ಭದ್ರತೆ ಕುರಿತು ಸರ್ಕಾರದ ಆದೇಶದಂತೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ.<br><br>ಖಾಸಗಿ ವ್ಯಕ್ತಿಗಳು ಸಂಬಂಧಪಟ್ಟ ಸರ್ಕಾರದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಶುಲ್ಕವನ್ನು ಭರಿಸುತ್ತಾರೆ. |

ಒಇ 123 ಪಿಸಿಇ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು